**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :133 ಫ್ರಾ.ಸಾ. : 61**

| | |
|---|---|
| ಸಾಕ್ಷಿಯ ಹೆಸರು | : ಬಿ ಎಲ್ ಅಸೋಡೆ. |
| ತಂದೆಯ ಹೆಸರು | : ಲಕ್ಷ್ಮಣ್ |
| ವಯಸ್ಸು | : 76 ವರ್ಷ |
| ಉದ್ಯೋಗ | : ನಿವೃತ್ತ ಆರಕ್ಷಕ ಉಪಾಧೀಕ್ಷಕರು. |
| ವಾಸ | : ಧಾರವಾಡ. |

**ದಿನಾಂಕಃ 28-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ-**

1. ನಾನು 2002 ರಿಂದ 2006 ರವರೆಗೆ ಪೊಲೀಸ ನಿರೀಕ್ಷಕರು ಆಗಿ ಧಾರವಾಡ ಲೋಕಾಯುಕ್ತದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 07.11.2005 ರಂದು ಮುಖ್ಯ ಕಚೇರಿಯ ಆದೇಶದ ಪ್ರಕಾರ ಕಾರವಾರ ಲೋಕಾಯುಕ್ತ ಪೊಲೀಸ ಠಾಣೆಯ ಹೆಚ್ಚುವರಿ ಪ್ರಭಾರವನ್ನು ವಹಿಸಿಕೊಳ್ಳಲು ಆದೇಶದಂತೆ ನಾನು ಕಾರವಾರಕ್ಕೆ ಬಂದು ಶ್ರೀ ಕೋಳುರು (ಫ್ರಾಸಾ-1) ರವರ ಕಡೆಯಿಂದ ಕಾರವಾರ ಲೋಕಾಯುಕ್ತ ಪೊಲೀಸ ಠಾಣೆಯ ಪ್ರಭಾರವನ್ನು ವಹಿಸಿಕೊಂಡೆ. ಲೋಕಾಯುಕ್ತ ಪೊಲೀಸ ಠಾಣೆಯ ಗುನ್ನಾ ಸಂಖ್ಯೆ 2/2005 ರ ಕಡತವನ್ನು ಸಹ ವಹಿಸಿಕೊಂಡೆ. ಅದರಲ್ಲಿ ಇದುವರೆಗೆ ಮಾಡಿದ ತನಿಖೆಯನ್ನು ಪರಿಶೀಲಿಸಿದೆ. ದಿನಾಂಕ 17.02.2006 ರಂದು ತನಿಖೆಯನ್ನು ಮುಂದುವರಿಸಿ ಕಾಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಕಾರ್ಯದರ್ಶಿಯವರು ಹೆಸರಿನಲ್ಲಿ ಇರುವ ಗ್ರಾಮ ಸ್ವಚ್ಛ ಯೋಜನೆಯ ಎಸ್.ಬಿ.ಎಮ್ ಬ್ಯಾಂಕ್ ಖಾತೆ ಸಿದ್ದಾಪುರ ಶಾಖೆ ಸಂಖ್ಯೆ 15/6361 ರಲ್ಲಿ ಸದರಿ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳು ಹಣ ತೆಗೆಯಲು ಉಪಯೋಗಿಸಿದ ಚೆಕ್ಕುಗಳನ್ನು ಮುಂದಿನ ತನಿಖೆಯ ಕುರಿತು ನಮಗೆ ವಹಿಸಲು ಬ್ಯಾಂಚ್ ಮ್ಯಾನೇಜರ್ ರವರಿಗೆ ವಿನಂತಿಸಿಕೊಂಡು ಮಾನ್ಯ ಆರಕ್ಷಕ ಅಧೀಕ್ಷಕರ ಮೂಲಕ ಕೋರಿಕೆ ಪತ್ರ ಸಲ್ಲಿಸಿಕೊಂಡೆ. ಈಗ ಆ ಪತ್ರ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪತ್ರವನ್ನು ನಿಪಿ-89 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-89(ಎ) ಎಂದು ಗುರುತಿಸಲಾಯಿತು. ದಿನಾಂಕ 17.03.2006 ರಂದು ಈ ಪ್ರಕರಣದ ತನಿಖೆಯ ಕುರಿತು ಸಿದ್ದಾಪುರ ಶಹರಕ್ಕೆ ಬೇಟಿ ನೀಡಿ ತಹಶೀಲ್ದಾರ ಸಿದ್ದಾಪುರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಿದ್ದಾಪುರರವರಿಗೆ ಈ

ಪ್ರಕರಣದಲ್ಲಿ ಸರ್ಕಾರಿ ಅಧಿಕಾರಿಗಳನ್ನು ಪಂಚರನ್ನಾಗಿ ನೇಮಿಸಿ ಕಳುಹಿಸಲು ಪತ್ರದ ಮೂಲಕ ವಿನಂತಿಸಿಕೊಂಡೆ. ಈಗ ಆ ಪತ್ರಗಳನ್ನು ನೋಡಿರುತ್ತೇನೆ. ಅವುಗಳಲ್ಲಿ ನನ್ನ ರುಜು ಇದೆ. ಆ ಪತ್ರಗಳನ್ನು ನಿಪಿ–90 ಮತ್ತು 91 ಎಂದು ಗುರುತಿಸಲಾಯಿತು. ಅವುಗಳಲ್ಲಿ ಸಾಕ್ಷಿಯ ರುಜುವನ್ನು ನಿಪಿ–90(ಎ) ಮತ್ತು 91(ಎ) ಎಂದು ಗುರುತಿಸಲಾಯಿತು. ಅದರಂತೆ ಶ್ರೀ ಮಂಜುನಾಥ ಗೋಪಾಲ್‌ಕೃಷ್ಣ ಕುಮಟಾಕರ್ ಮತ್ತೊಬ್ಬ ಅಧಿಕಾರಿ ಶ್ರಿಶಾಂಕ ಪಾಟೀಲ್ ರವರು ಪಂಚರಾಗಿ ನನ್ನ ಮುಂದೆ ಹಾಜರಾದರು. ಅವರಿಗೆ ನನ್ನ ಪರಿಚಯ ಮಾಡಿಕೊಂಡು ಅವರ ಪರಿಚಯ ತಿಳಿದುಕೊಂಡು ಪಂಚರಾಗಿ ಸಹಕರಿಸಲು ಕೋರಿದಾಗ ಅದಕ್ಕೆ ಅವರು ಒಪ್ಪಿದರು. ಅದರಂತೆ ಎಸ್.ಬಿ.ಎಮ್ ಸಿದ್ದಾಪುರ ಬ್ಯಾಂಚ್ ನ ಮ್ಯಾನೇಜರ್ ರವರು ಈ ಪ್ರಕರಣದಲ್ಲಿ ಬೇಕಾಗಿರುವ ಚೆಕ್ಕುಗಳನ್ನು ಹಾಗೂ Withdrawal slip ಗಳನ್ನು ನಮಗೆ ಹಾಜರುಪಡಿಸಿದರು. ಅವುಗಳನ್ನು ಪಂಚರ ಸಮಕ್ಷಮ ಜಪ್ತು ಮಾಡಿ ತಾಬಾಗೆ ತೆಗೆದುಕೊಂಡು ಪಂಚನಾಮೆಯನ್ನು ನಡೆಸಿ ಪಂಚರ ಸಹಿ, ಬ್ಯಾಂಕ್ ಮ್ಯಾನೇಜರ್ ಮತ್ತು ನಾನು ಸಹಿ ಮಾಡಿರುತ್ತೇವೆ. ಈಗ ಆ ಪಂಚನಾಮೆ ನೋಡಿರುತ್ತೇನೆ. ಅದನ್ನು ನಿಪಿ–92 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿಪಿ–92(ಎ) ಎಂದು ಗುರುತಿಸಲಾಯಿತು. ಈಗ ಬ್ಯಾಂಕ್ ಮಾನ್ಯೇಜರರವರು ಹಾಜರುಪಡಿಸಿದ ಪತ್ರ ಈಗ ನೋಡಿರುತ್ತೇನೆ. ಅದನ್ನು ಪಡೆದಾಗ ನಾನು ಹಾಕಿರುವ ರುಜು ಅದರಲ್ಲಿ ಇದೆ. ಸದರಿ ಪತ್ರವನ್ನು ನಿಪಿ–93 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿಪಿ–93(ಎ) ಎಂದು ಗುರುತಿಸಲಾಯಿತು. ನಾನು ಆಗ ಅವರು ಹಾಜರುಪಡಿಸಿದ ಚೆಕ್ಕುಗಳು ಮತ್ತು Withdrawal slip ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವುಗಳನ್ನು ನೋಡಿರುತ್ತೇನೆ. ಅವು 12 ಚೆಕ್ಕು ಮತ್ತು 4 Withdrawal slip ಮತ್ತು 1 ಖಾತೆ ತೆರೆಯಲು ಸಲ್ಲಿಸಿರುವ ಅರ್ಜಿ ಇರುತ್ತದೆ. ಚೆಕ್ಕುಗಳನ್ನು ನಿಪಿ–94 ರಿಂದ 105 ಎಂದು ಗುರುತಿಸಲಾಯಿತು. Withdrawal slip ಗಳನ್ನು ನಿಪಿ–106 ರಿಂದ 109 ಎಂದು ಗುರುತಿಸಲಾಯಿತು. ಖಾತೆ ತೆರೆಯಲು ಸಲ್ಲಿಸಿರುವ ಅರ್ಜಿಯನ್ನು ನಿಪಿ–110 ಎಂದು ಗುರುತಿಸಲಾಯಿತು. ನಂತರ ನಾನು ಜಪ್ತು ಮಾಡಿದ ದಾಖಲಾತಿಗಳನ್ನು ಮಾಲುಪಟ್ಟಿ ಸಂಖ್ಯೆ 2/2006 ರಲ್ಲಿ ನಮೂದಿಸಿ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ. ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಅವುಗಳನ್ನು ಕಳುಹಿಸಿಸಲು ಅನುಮತಿ ಪಡೆದಿರುತ್ತೇನೆ.

2. ನಂತರ ಅದೇ ದಿನ ಅದೇ ಪಂಚರ ಜೊತೆ ಕಾನಗೋಡು ಗ್ರಾಮ ಪಂಚಾಯತಿ ಕಚೇರಿಗೆ ಹೋಗಿ ಆರೋಪಿ ಹಾಗೂ ಕಾರ್ಯದರ್ಶಿಯವರ ಬಗ್ಗೆ ವಿಚಾರಣೆ ಮಾಡಿ ಅವರು ಅಲ್ಲಿ ಇಲ್ಲ ಮತ್ತು ಮನೆಯಲ್ಲಿಯೂ ಸಹ ಇಲ್ಲ ಎಂದು ಹೇಳಿದರು. ಈ ಬಗ್ಗೆ ಒಂದು ಪಂಚನಾಮೆಯನ್ನು ಅಲ್ಲಿ ಮಾಡಿದೆ. ಈಗ ಆ ಪಂಚನಾಮೆ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪಂಚನಾಮೆಯದನ್ನು ನಿಪಿ-111 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-111(ಎ) ಎಂದು ಗುರುತಿಸಲಾಯಿತು. ಕಾರ್ಯನಿರ್ವಾಹಕ ಅಧಿಕಾರಿ ತಾಲೂಕು ಪಂಚಾಯತಿ ಸಿದ್ದಾಪುರ ರವರಿಗೆ ಠಾಣೆಗೆ ಬಂದ ನಂತರ ಮನವಿಯನ್ನು ಲಿಖಿತವಾಗಿ ಸಲ್ಲಿಸಿ ಅಧ್ಯಕ್ಷ ಆದ ಆರೋಪಿ ಮತ್ತು ಕಾರ್ಯದರ್ಶಿ ಕಾನಗೋಡು ಗ್ರಾಮ ಪಂಚಾಯತಿ ರವರು ಕಾರ್ಯನಿರ್ವಾಹಕ ಅಧಿಕಾರಿ ತಾಲೂಕು ಪಂಚಾಯತಿ ಕಚೇರಿಯಲ್ಲಿ ದಿನಾಂಕ 24.03.2006 ರಂದು ಹಾಜರು ಇರುವಂತೆ ನಿರ್ದೇಶಿಸಲು ಕೋರಿದೆ. ಈಗ ಆ ಪತ್ರ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ಪತ್ರವನ್ನು ನಿಪಿ-112 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-112(ಎ) ಎಂದು ಗುರುತಿಸಲಾಯಿತು. ದಿನಾಂಕ 24.03.2006 ರಂದು ಸಿದ್ದಾಪುರ ಗ್ರಾಮಕ್ಕೆ ಬೇಟಿ ನೀಡಿ ಆರೋಪಿಯಾದ ಕಾನಗೋಡ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಅಲ್ಲಿನ ಕಾರ್ಯದರ್ಶಿಗಳನ್ನು ಬೇಟಿ ಮಾಡಿದೆ. ಅವರಿಬ್ಬರಿಗೂ ಪಂಚರು ಬರುವವರೆಗೆ ಇರುವಂತೆ ತಿಳಿಸಿದೆ. ಅದೇ ವೇಳೆಯಲ್ಲಿ ಈ ಪ್ರಕರಣದಲ್ಲಿ ಆರೋಪಿಗಳ ಮಾದರಿ ಸಹಿಗಳನ್ನು ಪಡೆಯುವದಕ್ಕಾಗಿ ಸಿದ್ದಾಪುರ ತಹಶೀಲ್ದಾರ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಪತ್ರವನ್ನು ಬರೆದೆ. ಈಗ ಆ ಪತ್ರಗಳನ್ನು ನೋಡಿರುತ್ತೇನೆ. ಅವುಗಳಲ್ಲಿ ನನ್ನ ರುಜು ಇದೆ. ಸದರಿ ಪತ್ರಗಳನ್ನು ಕ್ರಮವಾಗಿ ನಿಪಿ-113 ಮತ್ತು 114 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-113(ಎ) ಮತ್ತು 114(ಎ) ಎಂದು ಗುರುತಿಸಲಾಯಿತು. ಆ ಪತ್ರದಲ್ಲಿ ಪಂಚರನ್ನಾಗಿ ಅವರ ಸಿಬ್ಬಂದಿಯನ್ನು ಕಳುಹಿಸಿಕೊಡುವಂತೆ ನಾನು ಕೋರಿದೆ. ಅದರ ಪ್ರಕಾರ ದೋಸಾ-5 ಮತ್ತು 6 ರವರು ಪಂಚರಾಗಿ ತಾಲೂಕು ಪಂಚಾಯತಿ ಕಚೇರಿಗೆ ಹಾಜರಾದರು. ಅವರಿಗೆ ಪಂಚನಾಮೆ ವಿಷಯವನ್ನು ತಿಳಿಸಿದರೆ. ಅವರು ಪಂಚರು ಆಗಲು ಒಪ್ಪಿದರು. ಅವರ ಸಮಕ್ಷಮದಲ್ಲಿ ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷ ಆದ 1 ನೇ ಆರೋಪಿ ಮತ್ತು ಕಾರ್ಯದರ್ಶಿಯಾದ ಶಂಕರ್ ನಾರಾಯಣ ಭಟ್ಟ ರವರ ಮಾದರಿ ರುಜುಗಳನ್ನು 18 ಹಾಳೆಗಳಲ್ಲಿ ಪಡೆದಿರುತ್ತೇನೆ. ಆಗ ಪಡೆದ 1 ನೇ ಆರೋಪಿ ಅಧ್ಯಕ್ಷರ ಮಾದರಿ ಸಹಿ ಪುಟ ಸಂಖ್ಯೆ 1 ರಿಂದ 6 ರಲ್ಲಿ ಇದ್ದು ಅವುಗಳನ್ನು ಒಟ್ಟಾಗಿ ನಿಪಿ-115 ಎಂದು

ಗುರುತಿಸಲಾಯಿತು. ಅದರಲ್ಲಿ ಪಂಚರ ಮತ್ತು ನನ್ನ ರುಜು ಪ್ರತಿ ಪುಟದಲ್ಲಿ ಇದೆ. ಕೊನೆಯ ಪುಟದಲ್ಲಿ ಸಾಕ್ಷಿಯ ರುಜುವನ್ನು ನಿಪಿ-115(ಎ) ಎಂದು ಗುರುತಿಸಲಾಯಿತು. ಕಾರ್ಯದರ್ಶಿಯ ಮಾದರಿ ರುಜುಗಳು ಪುಟ ಸಂಖ್ಯೆ 7 ರಿಂದ 12 ರಲ್ಲಿ ಇದೆ. ಅದರಲ್ಲಿ ಪಂಚರ ಮತ್ತು ನನ್ನ ರುಜು ಪ್ರತಿ ಪುಟದಲ್ಲಿ ಇದೆ. ಅದನ್ನು ಒಟ್ಟಾರೆಯಾಗಿ ನಿಪಿ-116 ಎಂದು ಗುರುತಿಸಲಾಯಿತು. ಕೊನೆಯ ಪುಟದಲ್ಲಿ ಸಾಕ್ಷಿಯ ರುಜುವನ್ನು ನಿಪಿ-116(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಂತರ ಅಲ್ಲಿ ಕಾರ್ಯದರ್ಶಿಯಾಗಿ ಬಂದಿದ್ದ ಮಂಜುನಾಥ ನಾರಾಯಣ ನಾಯ್ಕು ರವರ ಮಾದರಿ ರುಜುಗಳನ್ನು ಸಹ ಅದೇ ಪಂಚರ ಸಮಕ್ಷಮ ಪುಟ ಸಂಖ್ಯೆ 13 ರಿಂದ 17 ರಲ್ಲಿ ಪಡೆದಿರುತ್ತೇನೆ. ಅದರಲ್ಲಿ ಪಂಚರ ಮತ್ತು ನನ್ನ ರುಜು ಪ್ರತಿ ಪುಟದಲ್ಲಿ ಇದೆ. ಅದನ್ನು ಒಟ್ಟಾರೆಯಾಗಿ ನಿಪಿ-117 ಎಂದು ಗುರುತಿಸಲಾಯಿತು. ಕೊನೆಯ ಪುಟದಲ್ಲಿ ಸಾಕ್ಷಿಯ ರುಜುವನ್ನು ನಿಪಿ-117(ಎ) ಎಂದು ಗುರುತಿಸಲಾಯಿತು. ಆಗ ಬರೆದ ಪಂಚನಾಮೆಯನ್ನು ಈಗ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ಪಂಚನಾಮೆಯನ್ನು ನಿಪಿ-118 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿಪಿ-118(ಎ) ಎಂದು ಗುರುತಿಸಲಾಯಿತು. ಆ ಪಂಚನಾಮೆಯಲ್ಲಿ ಮೇಲೆ ಹೇಳಿದ ಸದರಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಇಬ್ಬರು ಕಾರ್ಯದರ್ಶಿಗಳ ಸಹಿಯನ್ನು ಪಡೆದಿರುತ್ತೇನೆ. ಪಂಚನಾಮೆಗೆ ಇಬ್ಬರು ಪಂಚರು ಸಹಿ ಮಾಡಿರುತ್ತಾರೆ. ತನಿಖೆಯಲ್ಲಿ ಹಾಜರಾದ ಪಂಚರ ಹೇಳಿಕೆಗಳನ್ನು ಪ್ರತ್ಯೇಕವಾಗಿ ಪಡೆದುಕೊಂಡೆ. ದಿನಾಂಕ 29.03.2006 ರಂದು ಈ ಪ್ರಕರಣದಲ್ಲಿ ಜಪ್ತು ಮಾಡಿದ ಚೆಕ್ಕುಗಳು ಹಾಗೂ ಮಾದರಿ ಸಹಿಗಳನ್ನು ಸೀಲ್ ಮಾಡಿ ಪ್ಯಾಕ್ ಮಾಡಿ ನಮೂನೆ ನಂಬರ್ 156 ರಲ್ಲಿ ಪಾರ್ಮ್ ಗಳನ್ನು ತುಂಬಿ ದ್ವಿಪ್ರತಿಯನ್ನು ಮಾನ್ಯ ಆರಕ್ಷಕ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ಕಾರವಾರ ಮೂಲಕ ಸಲ್ಲಿಸಿದ್ದು, ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರು ರವರಿಗೆ ವಿನಂತಿಸಿಕೊಂಡಿದರಲ್ಲಿ ಈ ಚೆಕ್ಕುಗಳ ಮೇಲೆ ಇರುವ ಸಹಿ ಹಾಗೂ ತನಿಖೆಯಲ್ಲಿ ಪಡೆದ ಮಾದರಿ ಸಹಿಗಳೂ ಕೂಡ ಒಂದಕ್ಕೊಂದು ತುಲನೆ ಆಗುತ್ತವೆಯೋ ಹೇಗೆ ಎಂಬುದರ ಬಗ್ಗೆ ಅಭಿಪ್ರಾಯ ವರದಿಯನ್ನು ಕೋರಿರುತ್ತೇನೆ. ಈಗ ನಾನು ನಿರ್ದೇಶಕರು, ನ್ಯಾಯ ಸಂಬಂಧಿ ವಿಜ್ಞಾನ ಪ್ರಯೋಗಾಲಯ (ಕೈಬರಹ ತಜ್ಞರು ಬೆಂಗಳೂರುರವರಿಗೆ) ಬರೆದ ಪತ್ರವನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ಪತ್ರವನ್ನು ನಿಪಿ-119 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-119(ಎ) ಎಂದು ಗುರುತಿಸಲಾಯಿತು. ದಿನಾಂಕ 03.04.2006 ರಂದು ಸದರಿ ಕಾಗದ ಪತ್ರಗಳನ್ನು ಈ

ಮೇಲೆ ಹೇಳಿದ ದಾಖಲೆಗಳನ್ನು ಸಿಬ್ಬಂದಿ ಮೂಲಕ ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರಿಗೆ ಕಳುಹಿಸಿದ್ದು ಅವರು ಅದನ್ನು ಅಲ್ಲಿ ನೀಡಿ ಸ್ವೀಕೃತಿ ಪಡೆದು ನನ್ನ ಮುಂದೆ ಹಾಜರಾಗಿ ವರದಿ ಮಾಡಿಕೊಂಡರು. ದಿನಾಂಕ 05.09.2006 ರಂದು ನನಗೆ ಪದೋನ್ನತಿಯಾಗಿ ಬೆಂಗಳೂರು ಸಿ.ಐ.ಡಿಗೆ ವರ್ಗವಾದ ಕಾರಣ ನಾನು ಪ್ರಕರಣದ ಕಡತವನ್ನು ದೋಸಾ-135 ರವರಿಗೆ ವಹಿಸಿರುತ್ತೇನೆ. ನಾನು ಮೇಲೆ ಹೇಳಿದ ಕಾನಗೋಡು ಗ್ರಾಮ ಪಂಚಾಯತಿ ಅಧ್ಯಕ್ಷರು ಈಗ ನ್ಯಾಯಾಲಯದ ಮುಂದೆ ಹಾಜರು ಇರುವ 1 ನೇ ಆರೋಪಿ ಆಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

(ಶ್ರೀಮತಿ ಎಸ್.ಜಿ.ಎನ್ ರವರು ಅವರ ಹಿರಿಯ ಸಹೋದ್ಯೋಗಿ ಈ ದಿನ ಬಂದಿಲ್ಲಾ ಎಂದು ಪಾಟಿ ಸವಾಲಿಗೆ ಸಮಯ ಕೋರಿದ್ದಾರೆ. ಸಾಕ್ಷಿಗೆ ರೂ.750/- ಭತ್ಯೆ ಅನ್ನು ಪಾವತಿ ಮಾಡಿದ್ದಾರೆ. ಪಾಟಿ ಸವಾಲನ್ನು ಮುಂದೂಡಲಾಗಿದೆ. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ